# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇತರೆ ಪರೀಕ್ಷೆಗಳು
## ಮಲ್ಲೇಶ್ವರಂ, 6ನೇ ಅಡ್ಡ ರಸ್ತೆ, ಬೆಂಗಳೂರು-3

ಸಂಖ್ಯೆ: ವೈ2(ಇ.ಪ)ಬ.ಅ.ಬ/24/2019-20. ದಿನಾಂಕ:31-08-2019.

## ದರಪಟ್ಟಿ ಆಹ್ವಾನ ಪತ್ರ

**ವಿಷಯ:-**ಇತರೆ ಪರೀಕ್ಷೆಗಳ ವಿಭಾಗದಲ್ಲಿ ಗಣಕ ಶಾಖೆಗೆ ಬಯೋಮೆಟ್ರಿಕ್ ಸಾಧನ ಅಳವಡಿಸುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಇತರೆ ಪರೀಕ್ಷೆಗಳ ವಿಭಾಗದ ಗಣಕ ಶಾಖೆಯ ಕೊಠಡಿಗೆ ಹಾಲಿ ಇರುವ ಬಾಗಿಲಿಗೆ ಹೊಸದಾಗಿ ಬಯೋಮೆಟ್ರಿಕ್ ಖರೀದಿಸಿ ಅಳವಡಿಸುವ ಕುರಿತು ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದ್ದು ಸಂಸ್ಥೆಗಳು ಒಂದು ಇನ್/ಔಟ್ ಆಧಾರಿತ ಬಯೋಮೆಟ್ರಿಕ್ ಸಾಧನಕ್ಕೆ ತಗಲುವ ಮೊತ್ತಕ್ಕೆ(ಅಳವಡಿಕೆ ಒಳಗೊಂಡಂತೆ) ಜಿ.ಎಸ್.ಟಿ ಸೇರಿ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ದಿನಾಂಕ: 07-09-2019 ರಂದು ಸಂಜೆ 4 ಗಂಟೆಯೊಳಗೆ, ನಿರ್ದೇಶಕರು,(ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03 ಈ ವಿಳಾಸಕ್ಕೆ ಮುದ್ದಾಂ/ಅಂಚೆ ಮೂಲಕ ತಲುಪಿಸಲು ತಿಳಿಸಿದೆ.

**ಬಯೋಮೆಟ್ರಿಕ್ ಸಾಧನವು ಈ ಕೆಳಕಂಡ SPECIFICATION ಒಳಗೊಂಡಿರಬೇಕು:**

| | | |
|---|---|---|
| 1. | DISPLAY | 2.8" TFT COLOR LCD |
| 2. | FINGER PRINT | 3000 |
| 3. | RECORD CAPACITY | 100000 |
| 4. | IDENTIFICATION SPEED | <0.8 Secs |
| 5. | FRR | <0.01 |
| 6. | FAR | <0.0001 |
| 7. | WORKING VOLTAGE | 9v |
| 8. | WORKING STYLE | Standalone or Online |
| 9. | IDENTIFICATION STYLE | Fingerprint/Vard/Password/NFC |
| 10. | NAME DISPLAY | Yes |
| 11. | COMMUNICATION | TCP IP, RS485, USB, WAN |
| 12. | ACCESS CONTROL | Yes |
| 13. | INBUILT BELL | Setting Bell |
| 14. | INSTALLATION WAY | Wall Hung |
| 15. | PRODUCT SIZE | 190mmX170mmX40mm |

**ಷರತ್ತುಗಳು:**

1. ಸಂಬಂಧಿಸಿದಂತೆ ಒಟ್ಟಾರೆ ಅತಿ ಕಡಿಮೆ ದರ ನಮೂದಿಸುವ ಸಂಸ್ಥೆಯ ದರವನ್ನು ಮಾತ್ರ ಪರಿಗಣಿಸಲಾಗುವುದು. ಮತ್ತು ಎಲ್ಲಾ ತೆರಿಗೆ ಸೇರಿದಂತೆ ದರಗಳನ್ನು ನಮೂದಿಸುವುದು
2. ಸರಬರಾಜು ಮತ್ತು ಅಳವಡಿಸುವ ಬಯೋಮೆಟ್ರಿಕ್ ಸಾಧನ ಉತ್ತಮ ಕಂಪನಿಯದ್ದಾಗಿರಬೇಕು. ಕಳಪೆ ಗುಣಮಟ್ಟದ್ದಾಗಿದ್ದಲ್ಲಿ ತಿರಸ್ಕರಿಸಲಾಗುವುದು. ಮತ್ತು ಈ ಕಾರ್ಯಕ್ಕೆ ಮಂಡಳಿಯಿಂದ ಯಾವುದೇ ಮುಂಗಡ ನೀಡಲಾಗುವುದಿಲ್ಲ.
3. ಕಂಪನಿಗಳು ಈ ಕಾರ್ಯಕ್ಕೆ ಸೂಚಿಸುವ ದರಪಟ್ಟಿಗಳನ್ನು ಒಪ್ಪುವ, ತಿರಸ್ಕರಿಸುವ ಅಧಿಕಾರ ಮಾನ್ಯ ನಿರ್ದೇಶಕರು (ಇತರೆ ಪರೀಕ್ಷೆಗಳು) ರವರದ್ದಾಗಿರುತ್ತದೆ.

4. ಅತಿ ಕಡಿಮೆ ದರ ಸೂಚಿಸಿ ಆಯ್ಕೆ ಯಾಗುವ ಸಂಸ್ಥೆಗೆ (ಜಿಎಸ್.ಟಿ ಒಳಗೊಂಡಂತೆ) ನೀಡಲಾಗುವ ಕಾರ್ಯದೇಶದಲ್ಲಿ ಸೂಚಿಸುವ ದಿನಾಂಕದೊಳಗೆ ಪೂರೈಸುವುದು ಮತ್ತು ಸಾಧನಗಳನ್ನು ಮತ್ತು ಅಳವಡಿಸುವುದು ಹಾಗೂ ತರಬೇತಿ ನೀಡುವುದು. ವಿಳಂಬವಾದಲ್ಲಿ ದಿನಕ್ಕೆ ರೂ.200/– ರಂತೆ ದಂಡವನ್ನು ಬಿಲ್ಲಿನ ಮೊತ್ತದಲ್ಲಿ ಕಟಾಯಿಸಲಾಗುವುದು.
5. ಬಿಲ್ಲಿನ ಮೊತ್ತ ಪಾವತಿಸುವಲ್ಲಿ, ನಿಯಮಾನುಸಾರ ಟಿ.ಡಿ.ಎಸ್ ಕಟಾಯಿಸಿ ಉಳಕೆ ಮೊತ್ತ ಪಾವತಿಸಲಾಗುವುದು.
6. ದರಪಟ್ಟಿ ಲಕೋಟೆಯ ಮೇಲೆ ಕಡ್ಡಾಯವಾಗಿ "ಬಯೋಮೆಟ್ರಿಕ್ ಖರೀದಿಗೆ ಸಂಬಂಧಿಸಿದ ದರಪಟ್ಟಿ" ಎಂದು ನಮೂದಿಸುವುದು.
7. ಕಾರ್ಯಾದೇಶದಲ್ಲಿ ಸೂಚಿಸಲಾಗಿರುವ ಕೆಲಸವನ್ನು ಪೂರ್ಣಗೊಳಿಸಿದ ನಂತರ ಬಿಲ್ಲಿನ ಮೊತ್ತದಲ್ಲಿ 2% ಟಿ.ಡಿ.ಎಸ್ ಅನ್ನು ಕಟಾಯಿಸಿ ಉಳಿಕೆ ಮೊತ್ತವನ್ನು ಚೆಕ್ ಮೂಲಕ ಪಾವತಿಸಲಾಗುವುದು.
8. ಈ ಕಾರ್ಯದ ಸಂಬಂಧ ಯಾವುದೇ ಸಾಗಾಣಿಕೆ ವೆಚ್ಚವನ್ನು ಮಂಡಳಿವತಿಯಿಂದ ಪಾವತಿಸಲಾಗುವುದಿಲ್ಲ.
9. ದರಪಟ್ಟಿ ಸಲ್ಲಿಸುವ ಸಂಸ್ಥೆಯು ನಿಯಮಾನುಸಾರ ನೊಂದಣಿಯಾಗಿದ್ದು, ಎಸ್.ಜಿ.ಎಸ್.ಟಿ ಮತ್ತು ಸಿ.ಜಿ.ಎಸ್.ಟಿ ಸಂಖ್ಯೆ ಹೊಂದಿರಬೇಕು.

ತಮ್ಮ ವಿಶ್ವಾಸಿ,

20/8/19

(ವಿ.ಸುಮಂಗಲ)
ನಿರ್ದೇಶಕರು(ಇತರೆ ಪರೀಕ್ಷೆಗಳು)